## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ8[7]ಶಾಶಿಅ:ಹೆ.ಶಿ:54:2010-11 ದಿನಾಂಕ:05ನೇ ಆಗಸ್ಟ್ 2011

### : ಜ್ಞಾಪನ :

***ವಿಷಯ:*** ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುನ್ನು ಗುರ್ತಿಸುವ ಮತ್ತು ಮರುಹಂಚಿಕೆ ಮಾಡುವ ಬಗ್ಗೆ.

***ಉಲ್ಲೇಖ:*** ಈ ಕಛೇರಿ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ: 23.07.2011.

ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಖಾಲಿ ಹುದ್ದೆಗಳನ್ನು ಗುರ್ತಿಸಿ, ಸ್ಥಳಾಂತರಿಸುವ ಸಂಬಂಧ ವೇಳಾಪಟ್ಟಿ ನಿಗದಿಪಡಿಸಿ, ಅದರಂತೆ ಕ್ರಮ ಕೈಗೊಂಡು ವರದಿ ಸಲ್ಲಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಆದರೆ, ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯನ್ನು ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ನಡೆಸಲು ದಿನಾಂಕ:31.03.2011ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವುದರಿಂದ ಅದರಂತೆ ಮೂರು ಹಂತದಲ್ಲಿ [ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ] ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಮಾಡಲು ಕಾಲಾವಕಾಶ ಅವಶ್ಯವಾಗಿರುವುದರಿಂದ ಸದರಿ ಸುತ್ತೋಲೆಯಲ್ಲಿನ ಜಿಲ್ಲಾ ಹಂತದಲ್ಲಿ ಮರುಹಂಚಿಕೆ ಮಾಡುವ ಕಾರ್ಯದ ದಿನಾಂಕವನ್ನು ಈ ಕೆಳಕಂಡಂತೆ ಪರಿಷ್ಕರಿಸಿದೆ.

| ಕ.ಸಂ | ಹೆಚ್ಚುವರಿ ಶಿಕ್ಷಕರ ಸ್ಥಳಾಂತರಿಸುವ ಚಟುವಟಿಕೆ | ದಿನಾಂಕ |
|---|---|---|
| 01. | ***ಜಿಲ್ಲಾ ಹಂತದಲ್ಲಿ*** ಹೆಚ್ಚುವರಿ ಶಿಕ್ಷಕರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಕೊರತೆಯಿರುವ ಶಾಲೆಗಳನ್ನು ಗುರುತಿಸುವುದು. | 23.07.2011 |
| 02. | ಜಿಲ್ಲೆಯಲ್ಲಿ ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವ ದಿನಾಂಕ. | 05.08.2011 |
| 03. | ತಾತ್ಕಾಲಿಕ ಪಟ್ಟಿಗೆ ಶಿಕ್ಷಕರಿಂದ ಆಕ್ಷೇಪಣೆ ಸ್ವೀಕರಿಸುವ ಅಂತಿಮ ದಿನಾಂಕ | 12.08.2011 |
| 04. | ಜಿಲ್ಲಾ ಹಂತದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ | 16.08.2011 |
| 05. | ಹೆಚ್ಚುವರಿ ಶಿಕ್ಷಕರಿಗೆ ಜಿಲ್ಲಾ ಹಂತದಲ್ಲಿ ಕೌನ್ಸಿಲಿಂಗ್ ನಡೆಸಿ ಸ್ಥಳಾಂತರಿಸುವ ಆದೇಶ ನೀಡುವ ದಿನಾಂಕ. | 19.08.2011 |
| 06. | ಉಪ ನಿರ್ದೇಶಕರ ಹಂತದಲ್ಲಿ ಕೌನ್ಸಿಲಿಂಗ್ ನಂತರ ಉಳಿದಿರುವ ಖಾಲಿ ಹುದ್ದೆ ಪಟ್ಟಿಯನ್ನು ನಿರ್ದೇಶಕರ ಕಛೇರಿಗೆ ನೀಡುವ ದಿನಾಂಕ | 22.08.2011 |
| 07. | ಜಿಲ್ಲಾ ಹಂತದ ಕೌನ್ಸಿಲಿಂಗ್ ನಂತರ ಸದರಿ ಜಿಲ್ಲೆಯಲ್ಲಿ ಖಾಲಿ ಹುದ್ದೆ ಇಲ್ಲದೇ ಇದ್ದಲ್ಲಿ ಮಾತ್ರ ನಿರ್ದೇಶಕರ ಹಂತಕ್ಕೆ ಕೌನ್ಸಿಲಿಂಗ್ ಮಾಡಲು ಹೆಚ್ಚುವರಿ ಶಿಕ್ಷಕರ ಪಟ್ಟಿ ಸಲ್ಲಿಸುವ ದಿನಾಂಕ | 23.08.2011 |
| 08. | ನಿರ್ದೇಶಕರ ಹಂತದಲ್ಲಿ ಖಾಲಿ ಹುದ್ದೆ ಮಾಹಿತಿ ಹಾಗೂ ಹೆಚ್ಚುವರಿ ಶಿಕ್ಷಕರ ಪಟ್ಟಿ ಪ್ರಕಟಿಸುವ ದಿನಾಂಕ | 26.08.2011 |
| 09. | ನಿರ್ದೇಶಕರುಗಳ ಹಂತದಲ್ಲಿ ಕೌನ್ಸಿಲಿಂಗ್ ನಡೆಸುವ ದಿನಾಂಕ | 30.08.2011 |

ದಿ:23.01.2002ರ ಸರ್ಕಾರಿ ಸುತ್ತೋಲೆಯ ನಿಯಮದಡಿ ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸುವುದು ಹಾಗೂ ಅವರನ್ನು ಅವಶ್ಯಕತೆ ಇರುವ ಶಾಲೆಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಜಾರಿಗೊಳಿಸುವ ಕಾರ್ಯವನ್ನು ಮೇಲ್ಕಂಡ ವೇಳಾಪಟ್ಟಿಯಂತೆ ಸಕಾಲದಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ. ಇದೊಂದು ಸಮಯ ಸೀಮಿತ ಕಾರ್ಯಕ್ರಮವೆಂದು ಭಾವಿಸುವುದು.

[ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]

ನಿರ್ದೇಶಕರು [ಪ್ರೌಢ ಶಿಕ್ಷಣ]

***ಇವರಿಗೆ:***

*01.* ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು [ಆಡಳಿತ] ಇವರಿಗೆ ಅಗತ್ಯ ಕ್ರಮಕ್ಕಾಗಿ.

*02.* ನಿರ್ದೇಶಕರು, [ಪ್ರೌಢ ಶಿಕ್ಷಣ], ಸಾ.ಶಿ.ಇಲಾಖೆ, ಬೆಂಗಳೂರು. ಇವರಿಗೆ ಅಗತ್ಯ ಕ್ರಮಕ್ಕಾಗಿ.

*03.* ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಧಾರವಾಡ/ಗುಲ್ಬರ್ಗಾ, ಇವರಿಗೆ ಅಗತ್ಯ ಕ್ರಮಕ್ಕಾಗಿ.

*04.* ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ ಮಾಹಿತಿಗಾಗಿ

*05.* ಕಛೇರಿ ಪ್ರತಿ.

\\3-SERVER\Typing3\E\EST2\771-2011.doc